ಇದರ ವಿರುದ್ಧದ 'ಉಬ್ಬರ' ಸ್ಥಿತಿ ನನ್ನದು ಮತ್ತು ಗಂಡಸು ಜಾತಿಯ ಎಲ್ಲ ದುಂಡೋದರರದು ಅಂತ ನಾನು ಭಾವಿಸಿದ್ದೇನೆ. ಅದೇನೆಂದರೆ-

'ಪಟ್ಟದಾನೆಯಂತೆ ಸೊಂಟವು ಬೆಳೆದು ಪ್ಯಾಂಟು ನಿಲ್ಲದು ಸೊಂಟದ ಮ್ಯಾಲೆ' ಎಂದು.

ಆ ಜನಪದ ಕವಿಯು ಕೊಟ್ಟ ರೂಪಕ ಅಷ್ಟು ಸರಿಯಿಲ್ಲವೆಂಬುದು ನನ್ನ ಅಂಬೋಣ. ನಿಜವಾಗಿ ಪಟ್ಟದಾನೆಯಂತೆ ಉಬ್ಬಿದ ಹೊಟ್ಟೆಯ ಮೇಲೆಯೇ ಕಟ್ಟಲಿಕ್ಕೆ ಹೋದರೆ ಅಲ್ಲಿ ಏನೂ ನಿಲ್ಲುವುದಿಲ್ಲ. ಸೊರಗಿದ, ಚಪ್ಪಟೆಯಾದ ಹೊಟ್ಟೆಯ ಮೇಲೆ ಕಟ್ಟಿದರೆ ಅದು ಬಿಗಿಯಾಗಿ ನಿಲ್ಲುತ್ತದೆ. ಉದಾಹರಣೆಗೆ ಒಂದು ವಾಲಿಬಾಲ್ ಸುತ್ತಲೂ ಒಂದು ದಾರವನ್ನು ಕಟ್ಟಿ ಬಿಗಿಯ ಬಹುದೇ..? ಸಾಧ್ಯವಿಲ್ಲ. ಅದರ ದುಂಡು ಮೈವಳಿಕೆ ಬಿಗಿಯಲು ಬಿಡದೇ ತಕ್ಷಣ ಜಾರಿ ಬಿಡುತ್ತದೆ. ಇದೆಲ್ಲಾ ನನ್ನ ದುಂಡೋದರದ ಸ್ವಾನುಭವವೆಂದು ನೀವು ಹೇಳಿದರೆ ನಾನು ತಪ್ಪೇನೂ ಭಾವಿಸುವುದಿಲ್ಲ. ಒಂದು ಸತ್ಯಸ್ಯ ಸತ್ಯ ಸನ್ನಿವೇಶವನ್ನು ನಿಮ್ಮೆದುರು ಹೇಳಬಾರದು ಆದರೂ ಹೇಳುತ್ತೇನೆ ಕೇಳಿ. ಯಾಕೆಂದರೆ ಇದನ್ನೋದುತ್ತಿರುವವರಲ್ಲಿ ಯಾರಾದರೂ ಹೊಸಬ ಗುಂಡೋದರರಿದ್ದರೆ ಉಪಯೋಗವಾದಿತೆಂಬುದು ನನ್ನ ಕಳಕಳಿ. ನಾನು ಮನೆಯಲ್ಲಿರುವಾಗ ಯಾವಾಗಲೂ ಲುಂಗಿಯನ್ನು ಉಡುತ್ತೇನೆ. ಅವತ್ತು ಭಾಳ ದಿನದ ಮೇಲೆ ಬೆಳಬೆಳಗ್ಗೆ ದೂರದೂರಲ್ಲಿರುವ ಬಾಲ್ಯದ ಗೆಳೆಯ ಫೋನ್ ಮಾಡಿದ್ದನು. ಅಂಗಳದಲ್ಲಿ ಅಡ್ಡಾಡುತ್ತ ಮಾತನಾಡುತ್ತಿದ್ದೆ. ಅವನು ಹಳೆಯ ಮೋಜಿನ ದಿನಗಳನ್ನು ನೆನಪಿಸುತ್ತಿದ್ದ. ಅವನ್ನು ನೆನೆದು ಕೊಕ್ಕಾಸಿ ನಗುತ್ತಲಿದ್ದೆ. ಹೊಟ್ಟೆಯಿಂದ ಹೊರಟ ನಗುವಿನಲೆಗಳಿಂದಾಗಿ ಅದು ಕುಗ್ಗಿ-ಹಿಗ್ಗಿ, ಕುಗ್ಗಿ-ಹಿಗ್ಗುವ ವ್ಯತ್ಯಾಸದಿಂದ ಸೊಂಟಕ್ಕೆ ಸುತ್ತಿದ್ದ ಲುಂಗಿಯ ಬಂಧ ಸಡಿಲವಾಗಿ ಜಾರಿ ಬೀಳತೊಡಗಿತು! ಅದೇ ವೇಳೆಗೆ `ಸರ್ರ.. ಹಾಲು ತುಗೋರಿ' ಅಂತ ಹಾಲಿನಾಕೆ ಕಂಪೌಂಡಿನಾಚೆ ನಿಂತು ನನ್ನತ್ತ ಕೈ ಚಾಚಿದ್ದಳು. ಫೋನ್ ಕಟ್ ಮಾಡಿ ಹಾಲಿನ ಪಾತ್ರೆ ತಗೊಂಡೆ. ಒಂದು ಕೈಯಲ್ಲಿ ಫೊನು, ಇನ್ನೊಂದು ಕೈಯಲ್ಲಿ ಹಾಲಿನ ಪಾತ್ರೆ. ಸೊಂಟದಿಂದ ಜಾರುತ್ತಿರುವ ಲುಂಗಿಯನ್ನು ಯಾವ ಕೈಯಿಂದ ಎತ್ತಿಕೊಳ್ಳಲಿ?! ಹಂಗ.. ಬಿಟ್ಟರ ಲುಂಗಿ ನೆಲದ ಪಾಲು, ನನ್ನ ಮರ್ಯಾದೆ ಮೂರು ಪಾಲು! ಥಟ್ಟನೇ ಸೊಂಟವನ್ನು ಕಂಪೌಂಡ ಗೋಡೆಗಾನಿಸಿ ನಿಂತೆ. ಅಷ್ಟಕ್ಕಾಗಲೇ ತೊಡೆತನಕ ಜಾರುತ್ತಿದ್ದ ಲುಂಗಿ ಒತ್ತಿಕೊಂಡು ನಿಂತಿದ್ದರಿಂದ ಜಾರುವುದು ಉಳಿಯಿತು. ಗೋಡೆ ಮತ್ತು ತಕ್ಷಣಕ್ಕೆ ಹೊಳೆದ ನನ್ನ ಬುದ್ಧಿ ಚಾತುರ್ಯ ನನ್ನದೇ ಮರ್ಯಾದೆಯನ್ನು ಕಾಪಾಡಿತ್ತು ಅನ್ನಿರಿ. ನನ್ನ ಸಂಕಟ ನನಗೆ. ಆ ಪುಣ್ಯಾತಗಿತ್ತಿ ಹಾಲಿನಾಕೆ ಈ ವಾರದಲ್ಲಿ ತಗೊಂಡ ಹೆಚ್ಚಿನ ಹಾಲಿನ ಲೆಕ್ಕ ಒಪ್ಪಿಸಿ ನಂತರ ತನ್ನ ಕುಡುಕ ಗಂಡನ ಕಥೆ ಹೇಳತೊಡಗಿದಳು. ಮನೆಯೊಳಗಿಂದ ಯಾರಾದರೂ ಬಂದು ನನ್ನನ್ನು ರಕ್ಷಿಸಬಾರದೇ ಎಂದು ನಾನಂದುಕೊಳ್ಳುತ್ತಿದ್ದರೇ.. ಆಕೆ `ಮನೆಯಾನ ರೊಕ್ಕ ಒಟ್ಟ ಉಳಗಾಲ ಇಲ್ರೀ.. ಮನಿಯಾಗ ಮೂರ ಮಕ್ಕಳ ಸಾಲಿ ಖರ್ಚು.. ಹೆಂಗ್ ನಿಭಾಸಬೇಕರಿ' ಅವಳು ಅಸಹಾಯಕತೆಯನ್ನು ತೋಡಿಕೊಳ್ಳುತ್ತಿದ್ದಳು. ಅವಳಿಗಿಂತ ದೊಡ್ಡ ಅಸಹಾಯಕ ಆಗ ನಾನಾಗಿದ್ದೆ. ದೇವರೇ... ಈ ಹೆಂಗಸನ್ನು ಮೊದಲು ಇಲ್ಲಿಂದ ಸಾಗಹಾಕು ಅಂತ ಮೊರೆಯಿಡುತ್ತಿದ್ದೆ. ಮುನಸಿಪಾಲಿಟಿ ಕಸದ ಗಾಡಿಯ ರೂಪದಲ್ಲಿ ದೇವರು ಬಂದಿದ್ದ. 'ಕಸವ ತನ್ನಿರಿ.. ನಿಮ್ಮ ಕಸವ ತನ್ನಿರಿ..' ಎಂದು ಹಾಡುತ್ತ ಕಸ ಸಂಗ್ರಹಣೆಯ ಮಿನಿಲಾರಿ ಬಂದಿದ್ದರಿಂದ ಅವ್ವಾರಿಗೆ ಹೇಳ್ರಿ..' ಅಂತ ಹೊರಟಳು. ಮೊದಲು ಹೋಗು ಮಹಾತಾಯಿ ಅಂದವನೇ ಫೋನು, ಪಾತ್ರೆ ಗೋಡೆ ಮೇಲಿಟ್ಟು ಲುಂಗಿ ಸುತ್ತಿಕೊಂಡೆ.

ಅವತ್ತಿಗೇ ಲುಂಗಿ ಉಡುವುದು ಕಡೆಯದಾಗಿ ಹೋಯಿತು. ದುಂಡೋದರದ ಪಾಡಿನಿಂದ ಪ್ರತಿ ಉಚ್ವಾಸ ನಿಶ್ವಾಸದ ಕಂಪನಕ್ಕೂ ಸಹ ಕಟ್ಟಿದ್ದ ಲುಂಗಿ ಸಡಿಲವಾಗಿ ಬಿಚ್ಚುತ್ತಿತ್ತು. ತಾಸಿನಲ್ಲಿ ಏಳೆಂಟು ಸಲವಾದರೂ ಅದನ್ನು ಮತ್ತೆಮತ್ತೆ ಕಟ್ಟಿಕೊಳ್ಳ ಬೇಕಾಗುತ್ತಿತ್ತು. ಹಾಲಿನವಳ ಪ್ರಸಂಗ ಅದಕ್ಕೆ ಇತಿಶ್ರೀ ಹಾಡಿತು. ಅಲ್ಲಿಂದ ನಾನು ಮನೆಯಲ್ಲಿದ್ದಾಗ ತ್ರೀ-ಫೋರ್ಥ್ ಧರಿಸಲು ಶುರು ಮಾಡಿದೆ. ಲಂಬೋದರದ ದೆಸೆಯಿಂದ ನಾನು ದೈಹಿಕವಾಗಿ ಅಸಡ್ಡಾಳವಾಗಿ ತೋರುತ್ತಿದ್ದೆ ಒಂದು; ಇನ್ನೊಂದು ನನ್ನ ತಲೆಮಾರಿನವರೆಲ್ಲರ ಸಾಮಾನ್ಯ ಡ್ರೆಸ್‌ಕೋಡ್ ಆಗಿದ್ದ ಲುಂಗಿಯನ್ನು ಬಿಟ್ಟು ತ್ರೀ-ಫೋರ್ಥ್ ಉಡುವಂತೆ ಮಾಡಿತು. ಇದು ಒಂದು ಬಗೆಯ ಸಂಸ್ಕೃತಿಯಿಂದ ವಿಮುಖನಾಗಿದ್ದಷ್ಟೇ ಅಲ್ಲದೇ ನನಗೆ ಇಷ್ಟವಿರದಿದ್ದರೂ